**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ ಸಿ ನಂಃ 1547/2021**

ಫಿರ್ಯಾದಿಃ ಹೊನ್ನಾವರ ಪೋಲಿಸ್ ಠಾಣೆ,
ಹೊನ್ನಾವರ.

**– ವಿರುದ್ಧ –**

ಆರೋಪಿಃ 1. ಸಂತೋಷ ತಂದೆ ವಿಷ್ಣು ಮೇಸ್ತಾ,
ವಯಸ್ಸು 31 ವರ್ಷ, ರೈತಾಬಿ,
ಸಾಕೀನಃ ದಿಬ್ಬನಗಲ್ಲ, ಖರ್ವಾ,ಹೊನ್ನಾವರ.

2. ಪರಮೇಶ್ವರ ತಂದೆ ಅನಂತ ಮೇಸ್ತಾ,
ವಯಸ್ಸು 32 ವರ್ಷ, ಕೂಲಿಕೆಲಸ,
ಸಾಕೀನಃ ಸಿಂಧೂರ, ಖರ್ವಾ,ಹೊನ್ನಾವರ.

3. ಯೋಗೇಶ ತಂದೆ ವೆಂಕಟೇಶ ಮೇಸ್ತಾ,
ವಯಸ್ಸು 30 ವರ್ಷ, ಕೃಷಿಕೆಲಸ,
ಸಾಕೀನಃ ಮೂರ್ನಕಳ್ಳಿ, ಖರ್ವಾ,ಹೊನ್ನಾವರ.

4. ಕೃಷ್ಣ ತಂದೆ ವೆಂಕಟ್ರಮಣ ಮೇಸ್ತಾ,
ವಯಸ್ಸು 36 ವರ್ಷ, ಟೇಲರ್ ಕೆಲಸ,
ಸಾಕೀನಃ ಬರ್ನಕೇರಿ, ಖರ್ವಾ,ಹೊನ್ನಾವರ.

5. ಕೃಷ್ಣ ತಂದೆ ಕೇಶ ಗೌಡ,
ವಯಸ್ಸು 45 ವರ್ಷ, ಕೃಷಿ ಕೆಲಸ,
ಸಾಕೀನಃ ಮರಬಳ್ಳಿ,ಜಲವಳ್ಳಿ, ಹೊನ್ನಾವರ.

**ದೋಷಾರೋಪಣೆ**

ಶ್ರೀ ಚಂದ್ರಶೇಖರ ಈ ಬಣಕಾರ., ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿನ್ನ ಮೇಲೆ ಈ ಕೆಳಕಂಡ ದೋಷರೋಪಣೆಗಳನ್ನ ಹೊರಿಸುತ್ತಿದ್ದೇನೆ.

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ–

ದಿನಾಂಕಃ 18-07-2021ರಂದು ಸಾಯಂಕಾಲ 06-00 ಗಂಟೆಯ ಸಮಯದಲ್ಲಿ ಹೊನ್ನಾವರ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಖರ್ವಾ ಗ್ರಾಮದ ಬರ್ನಕೇರಿಯಲ್ಲಿ ಆರೋಪಿತರಾದ ನೀವುಗಳು ಚಾಸಾ.1/ರಾಜೇಶ ಗಣಪ ನಾಯ್ಕರವರ ಕುಟುಂಬದೊಂದಿಗೆ ಈ ಹಿಂದಿನಿಂದಲೂ ಜಾಗದ ವಿಚಾರವಾಗಿ ತಂಟೆ ತಕರಾರು ಮಾಡಿಕೊಂಡು ಬಂದು, ಈ ಬಗ್ಗೆ ಮಾನ್ಯ ನ್ಯಾಯಾಲಯದಲ್ಲಿ ದೂರು ದಾಖಲಾಗಿದ್ದು, ಇದೇ ವಿಷಯಕ್ಕೆ ದ್ವೇಷದಿಂದ ಇದ್ದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಆ ಮೂಲಕ

**ಭಾರತೀಯ ದಂಡ ಸಂಹಿತೆ ಕಲಂ 143 ಸಹ ಕಲಂ 149** ನೇದರಡಿ ಶಿಕ್ಷಾರ್ಹ ದೋಷರೋಪ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

**ಎರಡನೇಯದಾಗಿ**, ಆರೋಪಿತರಾದ ನೀವುಗಳು ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ದೊಂಬಿ ಎಬ್ಬಿಸಿ, ಅ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 147 ಸಹ ಕಲಂ 149** ನೇದರಡಿ ಶಿಕ್ಷಾರ್ಹ ದೋಷರೋಪ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

**ಮೂರನೇಯದಾಗಿ**, ಆರೋಪಿತರಾದ ನೀವುಗಳು ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಸಂಬಂಧಿಸಿದ ಜಾಗಕ್ಕೆ ಅಕ್ರಮ ಪ್ರವೇಶ ಮಾಡಿ, ಆ ಮೂಲಕ ನೀವುಗಳು **ಭಾರತೀಯ ದಂಡ ಸಂಹಿತೆ ಕಲಂ 447 ಸಹ ಕಲಂ 149** ನೇದರಡಿ ಶಿಕ್ಷಾರ್ಹ ದೋಷರೋಪ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

**ನಾಲ್ಕನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ರವರ ಜಾಗಕ್ಕೆ ಅಕ್ರಮ ಪ್ರವೇಶ ಮಾಡಿ, ಕೊಟ್ಟಿಗೆ ಕೆಳ ಭಾಗದಲ್ಲಿರುವ ಸಿಮೆಂಟ ತಳಪಾಯವನ್ನು ಕಿತ್ತು ಹಾಕಿದ್ದು, ಚಾಸಾ-1 ಮತ್ತು 4/ರತ್ನಾಕರ ಗಣಪಯ್ಯ ಮೇಸ್ತ ಇವರುಗಳು ನಿಮ್ಮನ್ನು ವಿಚಾರಿಸಲು ಹೋದಾಗ ಅವರನ್ನು ಅಡ್ಡಗಟ್ಟಿ ತಡೆದು, ಆ ಮೂಲಕ ನಿಮ್ಮಗಳ ಮೇಲೆ **ಭಾರತೀಯ ದಂಡ ಸಂಹಿತೆ ಕಲಂ 341 ಸಹ ಕಲಂ 149** ನೇದರಡಿಯಲ್ಲಿ ಶಿಕ್ಷಹಾರ್ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

**ಐದನೇಯದಾಗಿ,** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಕೈಯಿಂದ ಬೆನ್ನು, ಎದೆ, ಮುಖಕ್ಕೆ ಹೊಡೆದು ಹಾಗೂ 1 ನೇ ಆರೋಪಿತನಾದ ನೀನು ಚಾಸಾ-4 ರವರಿಗೆ ತುಳಿದು ಬೆನ್ನಿನ ಮೇಲೆ ಗುದ್ದಿ, ಸಾದಾ ಸ್ವರೂಪದ ಗಾಯ ಗೊಳಿಸಿ, ಆ ಮೂಲಕ ನಿಮ್ಮಗಳ ಮೇಲೆ **ಭಾರತೀಯ ದಂಡ ಸಂಹಿತೆ ಕಲಂ 323 ಸಹ ಕಲಂ 149** ನೇದರಡಿಯಲ್ಲಿ ಶಿಕ್ಷಹಾರ್ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

**ಆರನೇಯದಾಗಿ,** ಆರೋಪಿತರಾದ ನೀವುಗಳು ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ಮತ್ತು 4 ರವರ ಜೊತೆ ಜಗಳ ತೆಗೆದು ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಆ ಮೂಲಕ ನೀವುಗಳು **ಭಾರತೀಯ ದಂಡ ಸಂಹಿತೆ ಕಲಂ 504 ಸಹ ಕಲಂ 149** ನೇದರಡಿ ಶಿಕ್ಷಾರ್ಹ ದೋಷರೋಪ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

**ಕೊನೆಯದಾಗಿ**, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ಮತ್ತು 4 ನೇಯವರನ್ನು ಉದ್ದೇಶಿಸಿ ಇಂದು ನೀವು ಬಚಾವ ಆಗಿದ್ದೀರಿ ನೀವು ನ್ಯಾಯಾಲಯದಲ್ಲಿ ನೀಡಿದ್ದ ದೂರನ್ನು ವಾಪಸ್ ಪಡೆಯಬೇಕು ಇಲ್ಲದೇ ಇದ್ದಲ್ಲಿ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲಾ ಕೊಂದು ಹಾಕುತ್ತೇವೆ ಅಂತಾ ಜೀವ ಬೆದರಿಕೆ ಹಾಕಿ, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 506 ಸಹ ಕಲಂ 149** ನೇದರಡಿಯಲ್ಲಿ ಶಿಕ್ಷಹಾರ್ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ನೀವು ಮೇಲಿನ ಆರೋಪದಡಿಯಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ

ಪ್ರಶ್ನೆ 1. ನಿಮ್ಮ ಮೇಲೆ ಹೊರಿಸಲಾದ ಆರೋಪಣೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆಃ 2. ನೀವು ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

ಸಹಿ ಇದೆ

**ದಿನಾಂಕಃ 26-09-2022**

(**ಚಂದ್ರಶೇಖರ ಈ ಬಣಕಾರ**).,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.

ಆರೋಪಿಃ